೨. ವರದಕ್ಷಿಣೆ ಮತ್ತು ಮಹಿಳೆಯ ಮೇಲಿನ ದೌರ್ಜನ್ಯದ ಪ್ರಕರಣಗಳ ವಿಚಾರಣೆಗಾಗಿ, ಬೆಂಗಳೂರಿನಲ್ಲಿ ಒಂದು ವಿಶೇಷ ನ್ಯಾಯಾಲಯವನ್ನು ೧೯೯೦ ಆಗಸ್ಟ್ ತಿಂಗಳಿನಲ್ಲಿ ಸ್ಥಾಪಿಸಲಾಗಿದೆ. ಇದು ಪ್ರಕರಣಗಳ ಶೀಘ್ರ ವಿಲೇವಾರಿಗೆ ಬಹಳ ಸಹಾಯಕಾರಿಯಾಗಿದೆ.

೩. ೧೯೯೨ರಲ್ಲಿ ಈ ನ್ಯಾಯಾಲಯವು ೮ ಪ್ರಕರಣಗಳಲ್ಲಿ ಸಂಬಂಧಪಟ್ಟ ಆರೋಪಿಗಳಿಗೆ ಶಿಕ್ಷೆಯನ್ನು ವಿಧಿಸಿದೆ. ಈ ಶಿಕ್ಷೆಯ ಪ್ರಮಾಣವು ಜೀವಾವಧಿ ಶಿಕ್ಷೆಯು ಸೇರಿದಂತೆ ೭ ರಿಂದ ೩ ವರ್ಷಗಳ ಅವಧಿವರೆಗೆ ಆಗಿರುತ್ತದೆ.

೪. ಮಹಿಳೆಯ ಮೇಲಿನ ದೌರ್ಜನ್ಯದ ಪ್ರಕರಣಗಳ ವಿಶ್ಲೇಷಣೆ ನಡೆಸಿ, ಸೂಕ್ತ ಸಲಹೆಗಳನ್ನು ನೀಡಲು ಒಂದು ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಗಿದ್ದು, ಸರ್ಕಾರದ ಕಾನೂನು ಕಾರ್ಯದರ್ಶಿಯವರು ಇದರ ಮುಖ್ಯಸ್ಥರಾಗಿರುತ್ತಾರೆ. ಪೋಲೀಸ್ ಮಹಾ ನಿರ್ದೇಶಕರು, ಸರ್ಕಾರದ ಒಳಾಡಳಿತ ಇಲಾಖೆಯ ಕಾರ್ಯದರ್ಶಿಗಳು ಮತ್ತು ಅಭಿಯೋಗ ನಿರ್ದೇಶಕರು ಈ ಸಮಿತಿಯ ಸದಸ್ಯರಾಗಿರುತ್ತಾರೆ.

೫. ವರದಕ್ಷಿಣೆ ಸಾವಿನ ಪ್ರಕರಣಗಳ ತನಿಖೆಯ ಕಾಲದಲ್ಲಿ ಉಂಟಾಗುವ ಲೋಪದೋಷಗಳು ಹಾಗೂ ಅಪರಾಧಗಳ ಮೇಲೆ ಶೀಘ್ರ ಕ್ರಮ ಕೈಗೊಳ್ಳಲು ಇರುವ ಅಡೆತಡೆಗಳನ್ನು ವಿಚಾರಿಸಲು ಸಾಧ್ಯವಾಗುವಂತೆ ವರದಕ್ಷಿಣೆ ನಿಷೇಧ ಕಾಯಿದೆಗೆ ತಿದ್ದುಪಡಿ ತರುವಂತೆ ಸೂಚಿಸಿ ೧೫ ಅಂಶಗಳುಳ್ಳ ಒಂದು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ.

೬. ಮಹಿಳೆಯ ಮೇಲಿನ ದೌರ್ಜನ್ಯಗಳು ಮತ್ತು ವರದಕ್ಷಿಣೆ ಸಾವಿನ ಪ್ರಕರಣಗಳನ್ನು ತನಿಖೆ ಮಾಡುವ ಪೋಲೀಸ್ ಅಧಿಕಾರಿಗಳಿಗೆ ತರಬೇತಿ ಕಾರ್ಯಕ್ರಮಗಳು, ಚರ್ಚಾಕೂಟಗಳನ್ನು ಏರ್ಪಡಿಸಿದ್ದು, ಸಮಾಜ ಸೇವಕರು, ವೈದ್ಯಕೀಯ ವೃತ್ತಿಯವರು, ಕಾನೂನು ಪರಿಣಿತರನ್ನು ಕರೆಯಿಸಿ ಉಪನ್ಯಾಸ ನಿಡಲಾಗುತ್ತಿದೆ ಹಾಗೂ ವರದಕ್ಷಿಣೆ ಎಂಬ ಭೂತದ ಬಗ್ಗೆ ಸಮಾಜವನ್ನು ಎಚ್ಚರಗೊಳಿಸಲಾಗುತ್ತಿದೆ.

೭. ಮಹಿಳೆಯ ಮೇಲಿನ ದೌರ್ಜನ್ಯಗಳಲ್ಲಿ ನ್ಯಾಯಾಲಯವು ಆರೋಪಿಗಳಿಗೆ ಶಿಕ್ಷೆ ವಿಧಿಸಿದ ಬಗ್ಗೆ ಸಮೂಹ ಮಾಧ್ಯಮಗಳ ಮೂಲಕ ಪ್ರಚಾರ ನೀಡಲಾಗುತ್ತಿದೆ.

೮. ವರದಕ್ಷಿಣೆ ಸಾವಿನ ಪ್ರಕರಣಗಳನ್ನು ಘೋರ ಅಪರಾಧವೆಂದು ಪರಿಗಣಿಸಿ ಇಲಾಖೆಯ ಉನ್ನತ ಅಧಿಕಾರಿಗಳ ಅಂದರೆ ಡಿವೈ. ಎಸ್. ಪಿ. ದರ್ಜೆಯ ಅಧಿಕಾರಿಗಳಿಂದ ತನಿಖೆಯನ್ನು ನಡೆಸಲಾಗುತ್ತಿದೆ.

೯. ವರದಕ್ಷಿಣೆಯ ಸಮಸ್ಯೆಗಳ ನಿವಾರಣೆಗಾಗಿ ಪೋಲೀಸ್ ಇಲಾಖೆಯ ಅಧಿಕಾರಿಗಳು, ಅಭಿಯೋಜಕರುಗಳು ಮತ್ತು ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಆಗಾಗ ಸಭೆ ಸೇರಿ ಚರ್ಚಿಸಿ, ಸಾಧಾರಣಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಶಿವಾಜಿನಗರ ಬಸ್ ಸ್ಟ್ಯಾಂಡ್‌ನಲ್ಲಿ ಅತಿ ಹೆಚ್ಚಳವಾದ ನಗರ ಸಾರಿಗೆ ಬಸ್ಸುಗಳ ಸಂಚಾರ

೪೧೫ (೮೧೫) ಶ್ರೀ ಎ. ಕೆ. ಆನಂತಕೃಷ್ಣ (ಶಿವಾಜಿನಗರ); ಮಾನ್ಯ—ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಶಿವಾಜಿನಗರ ಬಸ್‌ಸ್ಟ್ಯಾಂಡ್‌ನಲ್ಲಿ ಅತಿ ಹೆಚ್ಚಳವಾದ ನಗರ ಸಾರಿಗೆ ಬಸ್ಸುಗಳು ಒಡಾಡುವುದನ್ನು ತಡೆಗಟ್ಟಲು : ಕಡಿವೆ ಮಾಡಲು ನಾಗರೀಕರಿಂದ ಹಾಗೂ ಜನರಿಂದ ಆಯ್ಕೆಯಾದವರಿಂದ ಹಲವಾರು ಮನವಿಗಳು ಸದನದಲ್ಲಿ ಸಲ್ಲಿಸಿದ್ದಾಗ್ಯೂ ಇದರ ಬಗ್ಗೆ ಸರ್ಕಾರದವರು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಹಾಗೂ ಸಂಚಾರ ಪೋಲೀಸ್ ಇಲಾಖೆಯವರು ಅಗತ್ಯ ಕ್ರಮ ತೆಗೆದುಕೊಳ್ಳುತ್ತಿಲ್ಲಾ. ಕಾರಣವೇನು?

ಆ) ಸಂಚಾರ ಪೋಲೀಸರಿಂದ ಹಾಗೂ ಬೆಂಗಳೂರು ನಗರ ಸಾರಿಗೆ ಅಧಿಕಾರದವರಿಂದ ಸಂಚಾರ ಮತ್ತು ನಿಲುಗಡೆಯನ್ನು ಸರಿಯಾಗಿ ನಿರ್ವಹಿಸದೇ ಇರುವ ಕಾರಣವಾಗಿ ಶಿವಾಜಿನಗರ ಬಸ್ ನಿಲ್ದಾಣದಲ್ಲಿ ಬೆಂಗಳೂರು ನಗರ ಸಾರಿಗೆ ಬಸ್ಸುಗಳು ನಿಲುಗಡೆಯಲ್ಲೇ ಸರಿಯಾಗಿಲ್ಲದೇ ಮುಖ್ಯ ರಸ್ತೆಗಳಲ್ಲಿ ನಿಲ್ಲುತ್ತಿವೆ?

ಇ) ಬೆಂಗಳೂರು ನಗರ ಸಾರಿಗೆ ಬಸ್ಸುಗಳನ್ನು ಸರಿಯಾದ ಸ್ಥಳಗಳಲ್ಲಿ ನಿಲ್ಲಿಸಲು (ಬಸ್ ನಿಲ್ದಾಣದಲ್ಲಿ) ಸರ್ಕಾರವು ಅಸಮರ್ಥವಾಗಿದೆಯೇ ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು).—

ಅ) ಶಿವಾಜಿನಗರ ಬಸ್ ನಿಲ್ದಾಣವು ಎರಡು ಎಕರೆ ಎಂಟು ಗುಂಟೆಯ ನಿವೇಶನದಲ್ಲಿ ಇದ್ದು, ಹೆಚ್ಚುತ್ತಿರುವ ಸಾರಿಗೆ ಬೇಡಿಕೆಗಳಿಂದಾಗಿ ಬಹಳ ಚಿಕ್ಕದಾಗಿರುತ್ತದೆ ೧೯೭೮ನೇ ಇಸವಿಯಲ್ಲಿ ೭೬೫ ನಿರ್ಗಮನಗಳಿದ್ದು ಅದು ೩೩೫೦ಕ್ಕೆ ಹೆಚ್ಚುವರಿಯಾಗಿದೆ. ಆದರೆ ನಿವೇಶನ ಮಾತ್ರ ಇದ್ದಷ್ಟೇ ಇದೆ. ಈ ಸದರಿ ನಿವೇಶನವನ್ನು ವಿಸ್ತರಿಸಲು ಕೆ.ಆರ್.ಡಿ.ಸಿ.ಎ. ಸಂಸ್ಥೆಯು ದಿನಾಂಕ ೧೦-೬-೧೯೯೧ರಂದು ಬೆಂಗಳೂರು ಮಹಾನಗರ ಪಾಲಿಕೆಯವರಿಗೆ ಹೆಚ್ಚುವರಿ ಜಾಗದ ಅಳತೆ ೩೫x೩೬ ಅಡಿ ನಿವೇಶನವನ್ನು ಶಿವಾಜಿನಗರದ ಕ್ರೀಡಾಂಗಣದ ಪಶ್ಚಿಮ ಭಾಗದಲ್ಲಿರುವಂತ ಜಾಗವನ್ನು ಬಸ್ ನಿಲ್ದಾಣದ ವಿಸ್ತರಣೆಗೆ ನೀಡುವಂತೆ ಕೋರಲಾಗಿತ್ತು. ಸದರಿ ವಿಷಯವು ಮಹಾನಗರ ಪಾಲಿಕೆಯ ಪರಿಶೀಲನೆಯಲ್ಲಿದೆ.

ಇದಲ್ಲದೆ, ಕ.ರಾ.ರ.ಸಾ. ಸಂಸ್ಥೆಯು ಸದರಿ ಬಸ್ ನಿಲ್ದಾಣಕ್ಕೆ ಹೊಂದಿಕೊಂಡಿರುವ ಸಂಪಂಗಿ ಕಣ್ಣು ಚಿಕಿತ್ಸಾಲಯದ ಮತ್ತು ಬೌರಿಂಗ್ ಆಸ್ಪತ್ರೆಯು ದಾದಿಗಳ ವಸತಿ ಗೃಹಗಳನ್ನು ಬಸ್ ನಿಲ್ದಾಣದ ವಿಸ್ತರಣೆಗೆ ಭೂಸ್ವಾಧೀನಗೊಳಿಸಲು ಪ್ರಸ್ತಾವನೆ ಮಾಡಲಾಗಿತ್ತು. ಈ ಭೂ ಸ್ವಾಧೀನದ ವೆಚ್ಚವು ದುಭಾರಿಯಾದುದರಿಂದ ಕ.ರಾ.ರ.ಸಾ. ಸಂಸ್ಥೆಯು ಸದರಿ ವಿಷಯದಲ್ಲಿ ಅಂತಿಮ ನಿರ್ಧಾರ ತೆಗೆದು ಕೊಂಡಿಲ್ಲ. ದಾದಿಯರ ಗೃಹಗಳ ಸ್ವಾಧೀನದ ಬಗ್ಗೆ ಆರೋಗ್ಯ ಮತ್ತು ಕುಟುಂಬ ಇಲಾಖೆಯು ಈ ಭೂಮಿಯನ್ನು ನೀಡಲು ನಿರಾಕರಿಸಿದೆ. ಆದಾಗ್ಯೂ ಸತತ ಪ್ರಯತ್ನದ ನಂತರವೂ ಸೂಕ್ತ ನಿವೇಶನ ಇಲ್ಲಿಯವರೆಗೆ ದೊರಕಿರುವುದಿಲ್ಲ.

ಆ) ಬಸ್ಸಿನ ಸೇವೆಗಳು ಹೆಚ್ಚುತ್ತಿರುವ ಕಾರಣ ಇಕ್ಕಟ್ಟಾಗಿರುತ್ತದೆ. ಆದಾಗ್ಯೂ ಬಸ್ಸುಗಳ ಚಲನ ವಲನಗಳಿಗೆ ಹಾಗೂ ನಿಲುಗಡೆಯ ಬಗ್ಗೆ ಮೇಲ್ವಿಚಾರಣೆ ಮಾಡಲು ಅಧಿಕಾರಿಗಳನ್ನು ನಿಯೋಜಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಅಲ್ಲದೆ ಕೆಲವು ಸಿಬ್ಬಂದಿ ಬದಲಾವಣೆಗಳನ್ನು ಮತ್ತು ವಿಶ್ರಾಂತಿ ಸಮಯವನ್ನು ಬೇರೆ ಸ್ಥಳಗಳಾದ ದೊಮ್ಮಲೂರು ಜಯನಗರದ ಸ್ಥಳಗಳಿಗೆ ಬದಲಾಯಿಸಲು ಸಹ ಕ್ರಮ ತೆಗೆದುಕೊಳ್ಳಲಾಗಿದೆ.

ಇ) ಉದ್ಭವಿಸುವುದಿಲ್ಲ.

ಸ್ವಾತಂತ್ರ್ಯ ಹೋರಾಟಗಾರರು ಕಲಾವಿದರು ಕ್ರೀಡಾಪಟುಗಳು ಮುಂತಾದವರಿಗೆ ಹಂಚಲಾದ ನಿವೇಶನಗಳ ಸಂಖ್ಯೆ

೪೦೬ (೭೫೫) ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;—

ಅ) ದಿನಾಂಕ ೧-೧೦-೯೨ ರಿಂದ ೧೫-೯-೯೪ರ ಅವಧಿಯಲ್ಲಿ ಸ್ವಾತಂತ್ರ್ಯ ಹೋರಾಟಗಾರರು, ಕಲಾವಿದರು, ಕ್ರೀಡಾ ಪಟುಗಳು ಮುಂತಾದ ಪ್ರವರ್ಗದಲ್ಲಿ ಒಟ್ಟು ಹಂಚಿಕೆ ಮಾಡಲಾದ ಬಿಡಿ ನಿವೇಶನಗಳ ಸಂಖ್ಯೆ ಎಷ್ಟು ?

ಆ) ಹೀಗೆ ಹಂಚಿಕೆ ಮಾಡಲಾದ ವ್ಯಕ್ತಿಗಳ ವಿಳಾಸ, ನಿವೇಶನ ಸಂಖ್ಯೆ, ಬಡಾವಣೆ, ನಿವೇಶನದ ಅಳತೆ, ಹಾಗೂ ನಿವೇಶನದ ಬೆಲೆಯ ಬಗ್ಗೆ ವಿವರ ಒದಗಿಸಬಹುದು ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು),—

ಅ) ೧-೧೦-೧೯೯೨ ರಿಂದ ೨೪-೧೦-೧೯೯೨ರವರೆಗೆ ೧೫೯ ಮಂದಿಗೆ ಹಾಗೂ ಇತ್ತೀಚಿನ ಅವಧಿಯಲ್ಲಿ (ಅಂದರೆ ೧೫-೯-೯೪ರವರೆಗೆ) ೧೩ ಮಂದಿಗೆ ಬಿಡಿ ನಿವೇಶನ ಹಂಚಿಕೆ ಮಾಡಲಾಗಿದೆ.

ಆ) ವಿವರಗಳನ್ನು ಅನುಬಂಧದಲ್ಲಿ ನೀಡಿದೆ.